# ಮಗು ಆಗದೇ ಇರಲು ಏನು ಕಾರಣ?



ಮದುವೆಯಾಗಿ ಅನೇಕ ವರ್ಷಗಳಾದರೂ ಮಡಿಲಲ್ಲಿ ಮಗು ಬರದೇ ಇದ್ದಾಗ ದಂಪತಿಗಳಲ್ಲಿ ಒಂದು ರೀತಿಯ ಆತಂಕ ಶುರುವಾಗುತ್ತದೆ. ಮಗುವಿಗೆ ಜನ್ಮನೀಡಲು ಸಾಧ್ಯವಾಗದ ಮಹಿಳೆಯನ್ನು ನೋಡುವ ಮನೆಯವರ ದೃಷ್ಟಿಕೋನವೇ ಬದಲಾಗಿಬಿಡುತ್ತದೆ. ಅಕ್ಕಪಕ್ಕದ ಮನೆಯವರು ಅವಳಿಗೆ ಕ್ರಮೇಣ 'ಬಂಜೆ' ಎಂಬ ಹಣೆಪಟ್ಟಿ ಅಚಿಟಿಸಿಬಿಡುತ್ತಾರೆ. ಅವಳಿಗೆ ತಮ್ಮ ಮಕ್ಕಳನ್ನು ಮುಟ್ಟಲು ಕೂಡ ಅವಕಾಶ ಕೊಡುವುದಿಲ್ಲ. ಈ ರೀತಿಯಾಗಿ ತಮ್ಮವರಿಂದ-ಬೇರೆಯವರಿಂದ ತಿರಸ್ಕೃತಳಾಗಿ ಉಳಿಯಬೇಕಾಗುತ್ತದೆ.

### ಮಗು ಆಗದೇ ಇರಲು ಕಾರಣಗಳು

ಸಾಮಾನ್ಯವಾಗಿ ದಂಪತಿಗಳಿಗೆ ಮಗು ಆಗದೇ ಇರಲು ಅನೇಕ ಕಾರಣಗಳಿರುತ್ತವೆ. ತಡವಾಗಿ ಮದುವೆಯಾಗುವುದು, ಮದುವೆಯಾದ ಬಳಿಕ ಅನೇಕ ವರ್ಷಗಳ ಕಾಲ ಮಗು ಆಗದೇ ಇರುವಂತೆ ಯೋಜನೆ ಮಾಡುವುದು, ಅನೇಕ ಬಗೆಯ ರೋಗಗಗಳು ಮತ್ತು ದಂಪತಿಗಳಲ್ಲಿರುವ ತಪ್ಪು ಕಲ್ಪನೆಗಳು ಮಗು ಆಗದೇ ಇರಲು ಕಾರಣವಾಗಿರಬಹುದು. ಗರ್ಭದಾರಣೆ ಆಗದೇ ಇರಲು ಸ್ತ್ರೀ-ಪುರುಷ ಇಬ್ಬರೂ 50:50 ಕಾರಣವಾಗಿರಬಹುದು.

**ಪುರುಷರ ಸಮಸ್ಯೆ:** ಗಂಡಸರಲ್ಲಿ ಸಾಕಷ್ಟು ಪ್ರಮಾಣದಲ್ಲಿ ವೀರ್ಯಾಣುಗಳು ಇರದೇ ಇರುವುದು. ಅವುಗಳ ಆಕಾರ ವಿಕಾರವಾಗಿರುವುದು, ಸಮರ್ಪಕ ಚಲನೆ ಇರದೇ ಇರುವುದು ಈ ಎಲ್ಲ ಕಾರಣಗಳಿಂದ ಗರ್ಭಧರಿಸಲು ಅಡ್ಡಿಯಾಗಿರುಬಹುದು.

**ಮಹಿಳೆಯರಲ್ಲಿ ಸಮಸ್ಯೆ:** ಗರ್ಭಧಾರಣೆ ಆಗದೇ ಇರಲು ಅಂಡಾಣು ಕೊರತೆ ಒಂದು ಮುಖ್ಯಕಾರಣ, ಹಾರ್ಮೋನುಗಳು ಅಸಮತೋಲನ, ಥೈರಾಯ್ಡ್ ಸಮಸ್ಯೆ, ಪಾಲಿಸಿಸ್ಟಿಕ್ ಓವೇರಿಯನ್, ಋತುಚಕ್ರದಲ್ಲಿ ಏರುಪೇರು ಇವು ಕೂಡ ಗರ್ಭಧಾರಣೆಗೆ ತಡೆಯನ್ನುಂಟು ಮಾಡಬಹುದು. ಮಹಿಳೆಯ ಸ್ಥೂಲದೇಹ ಕೂಡ ಗರ್ಭನಿಲ್ಲದೇ ಇರಲು ಕಾರಣವಾಗಬಹುದು. ಆ ತೊಂದರೆಗಳನ್ನು ನೀಗಿಸಿಕೊಂಡು ಗಂಡ-ಹೆಂಡತಿ ಇಬ್ಬರೂ ಒಳ್ಳೆಯ ಮನಸ್ಸಿನಿಂದ ಪ್ರಯತ್ನ ಮಾಡಿದರೆ ಮಗುವಿನ ಆಸೆಯನ್ನು ಖಂಡಿತ ಈಡೇರಿಸಿಕೊಳ್ಳಬಹುದು.

**ಜ್ಞಾನದ ಕೊರತೆ:** ಮಕ್ಕಳಾಗದೇ ಇರಲಲು ಕೆಲವೊಮ್ಮೆ ದಂಪತಿಗಳ ಅಜ್ಞಾನ ಕೂಡ ಕಾರಣವಾಗಿರುತ್ತದೆ. ಗಂಡ-ಹೆಂಡತಿ ಯಾವ ದಿನಗಳಲ್ಲಿ ಸಮಾಗಮ ನಡೆಸಿದರೆ ಫಲಪ್ರದ ಎನ್ನುವ ಸಣ್ಣ ತಿಳುವಳಿಕೆ ಕೂಡ ಕೆಲವರಿಗಿರುವುದಿಲ್ಲ. ಅಂಡಾಣು ಬಿಡುಗಡೆಯ ಬಗೆಗೂ ಅವರ ಅಜ್ಞಾನ ಹೋಗಲಾಡಿಸಿ ನೈಸರ್ಗಿಕ ರೀತಿಯಲ್ಲಿ ಮಗು ಆಗುವಂತೆ ಮಾಡಬಹುದು.

**ಸೂಕ್ತಸಮಯದಲ್ಲಿ ಚಿಕಿತ್ಸೆ:**

ಮದುವೆಯಾಗಿ ಅನೇಕ ವರ್ಷಗಳಾದರೂ ಮಗು ಆಗದೇ ಇದ್ದಾಗ ದಂಪತಿಗಳು ಪೂಜೆ, ಪುನಸ್ಕಾರ, ಯಾರ್‍ಯಾರೋ ವೈದ್ಯರನ್ನು ಕಂಡು ತಮ್ಮ ಸಮಸ್ಯೆ ಹೇಳಿಕೊಳ್ಳುತ್ತಾರೆ. ಆದರೂ ಯಾವುದೇ ಪ್ರಯೋಜನವಾಗುವುದಿಲ್ಲ, ಮಾನಸಿಕ ನೆಮ್ಮದಿ ಹೊರಟುಹೋಗುತ್ತದೆ. ಆರ್ಥಿಕ ಹಾನಿಯಾಗತ್ತದೆ. ದಂಪತಿಗಳು ಸೂಕ್ತ ಸಮಯದಲ್ಲಿ ಸೂಕ್ತ ವೈದ್ಯರನ್ನು ಕಂಡರೆ ಸಾಕಷ್ಟು ಒಳ್ಳೆಯ ಫಲಿತಾಂಶ ಕಂಡುಕೊಳ್ಳಬಹುದು.

### ದಂಪತಿಗಳು ಏನು ಮಾಡಬೇಕು?

ಮದುವೆಯಾಗಿ 1 ವರ್ಷದವರೆಗೂ ಮಕ್ಕಳಾಗದಿದ್ದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು, ಒಂದು ವೇಳೆ ಮಹಿಳೆಯ ವಯಸ್ಸು 35 ದಾಟಿದ್ದಲ್ಲಿ 6 ತಿಂಗಳೊಳಗೆ ವೈದ್ಯರನ್ನು ಸಂಪರ್ಕಿಸಬೇಕು. ಒಂದು ವೇಳೆ ದಂಪತಿಗಳು ಗರ್ಭಧಾರಣೆ ಮುಂದೂಡ ಬೇಕಿದ್ದರೂ ವೈದ್ಯರ ಸಲಹೆ ಅನುಸರಿಸಿಯೇ ಮುಂದುವರಿಯಬೇಕು.

### 'ಗರ್ಭಗುಡಿ'ಯ ಚಿಕಿತ್ಸಾ ವಿಧಾನ

ಬಂಜೆತನಕ್ಕೆ ಪರಿಣಾಮಕಾರಿ ಚಿಕಿತ್ಸೆ ನೀಡುವಲ್ಲಿ ಹೆಸರುವಾಸಿಯಾದ 'ಗರ್ಭಗುಡಿ' ಐವಿಎಫ್ ಸೆಂಟರಿನಲ್ಲಿ ದಂಪತಿಗಳು ಕಾಲಿಡುತ್ತಿದ್ದಂತೆ ಅವರಿಗೆ ಒಮ್ಮೆಲೆ ಐವಿಎಫ್ ವಿಧಾನ ಅನುಸರಿಸಲಾಗುವುದಿಲ್ಲ. ದಂಪತಿಗಳಿಗೆ ಕೌನ್ಸೆಲಿಂಗ್ ನಡೆಸಿ ಯಾವ ಕಾರಣದಿಂದ ಅವರಿಗೆ ಮಗು ಆಗಿಲ್ಲ ಎಂಬುದನ್ನು ತಿಳಿದುಕೊಳ್ಳಲಾಗುತ್ತದೆ.

### 'ಗರ್ಭಗುಡಿ'ಯ ಕಲ್ಪನೆ

**ದೇವರ ಗರ್ಭಗುಡಿಯ ಮುಖಾಂತರ ನಮ್ಮಲ್ಲಿ ಆಧ್ಯಾತ್ಮದ ಮೊಳಕೆ ಚಿಗುರುತ್ತದೆ. ಅದೇ ರೀತಿ ಮಹಿಳೆಯ ಗರ್ಭದಲ್ಲಿ ಹೊಸದೊಂದು ಜೀವಿಯ ಸೃಷ್ಠಿಯಾಗುತ್ತದೆ. ವಿಜ್ಞಾನ ಹಾಗೂ ಆಧ್ಯಾತ್ಮದ ಸಂಗಮವೆಂಬಂತೆ ಈ ಚಿಕಿತ್ಸಾ ಕೇಂದ್ರಕ್ಕೆ 'ಗರ್ಭಗುಡಿ' ಎಂದು ನಾಮಕರಣ ಮಾಡಲಾಯಿತು.**

### ಉಚಿತ ಶಿಬಿರಗಳು

**'ಗರ್ಭಗುಡಿ' ಐವಿಎಫ್ ಸೆಂಟರ್‌ವತಿಯಿಂದ ರಾಜ್ಯದ ಬೇರೆ ಬೇರೆ ಕಡೆ ವೀರ್ಯ ಪರೀಕ್ಷಾ ಶಿಬಿರಗಳನ್ನು ಏರ್ಪಡಿಸಲಾಗುತ್ತದೆ. ಈಗಾಗಲೇ ಶಿವಮೊಗ್ಗ, ಮಾಗಡಿ, ಚಿಂತಾಮಣಿ, ರಾಮನಗರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಕನಕಪುರ, ಮಾಲೂರು ಹೀಗೆ ಅನೇಕ ಕಡೆ ಶಿಬಿರ ಏರ್ಪಡಿಸಲಾಗಿತ್ತು. ಸಂಘ-ಸಂಸ್ಥೆಗಳು ಈ ರೀತಿಯ ಶಿಬಿರ ಏರ್ಪಡಿಸುವುದಿದ್ದರೆ 'ಗರ್ಭಗುಡಿ' ಐವಿಎಫ್ ಸೆಂಟರ್ ಸಂಪರ್ಕಿಸಬಹುದು.**

ಪುರುಷನಿಗೆ ವೀರ್ಯಾಣು ಪರೀಕ್ಷೆ ನಡೆಸಲಾಗುತ್ತದೆ. ಅವನಲ್ಲಿ ಯಾವುದೇ ತೊಂದರೆಯಿರದಿದ್ದರೆ ಮಹಿಳೆಗೆ ಹಲವು ಬಗೆಯ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಗಂಡ ಸಂಪೂರ್ಣ ಫಿಟ್ ಆಗಿದ್ದು ಹೆಂಡತಿಯಲ್ಲಿ ದೋಷ ಇದ್ದರೆ ಮೊದಲು ಹಾರ್ಮೋನು ಪರೀಕ್ಷೆ ನಡೆಸಲಾಗುತ್ತದೆ. ನಂತರ ಗರ್ಭನಾಳಗಳ ಪರೀಕ್ಷೆಗಾಗಿ ಎಚ್‌ಎಸ್‌ಜಿ ಟೆಸ್ಟ್ ಮಾಡಿಸಲಾಗುತ್ತದೆ.

ಗರ್ಭನಾಳದಲ್ಲಿ ಸಮಸ್ಯೆ ಇದ್ದರೆ ಐಯುಐ ಮುಖಾಂತರ ಗರ್ಭಧಾರಣೆ ಆಗುವಂತೆ ಮಾಡಲಾಗುತ್ತದೆ.

**ಐಯುಐ ಪ್ರಕ್ರಿಯೆ ಹೇಗೆ? :** ಇದೊಂದು ಸುಲಭ ಪ್ರಕ್ರಿಯೆ, ಹೆಚ್ಚು ಸಮಯವೂ ತಗುಲುವುದಿಲ್ಲ, ಮಹಿಳೆಗೆ ಅಂಡಾಣು ಬಿಡುಗಡೆಯಾಗುವ ದಿನವನ್ನು ಗಮನದಲ್ಲಿಟ್ಟುಕೊಂಡು, ಪತಿಯ ವೀರ್ಯಾಣು ಪಡೆದು ಟ್ಯೂಬ್‌ನಲ್ಲಿ ಸೇರ್ಪಡೆಗೊಳಿಸಲಾಗುತ್ತದೆ. ಹೀಗೆ ಜೀವ ಸೃಷ್ಠಿಗೆ ನಾಂದಿಯಾಗುತ್ತದೆ. ಮಧ್ಯಮ ವರ್ಗದವರಿಗೂ ಕೈಗೆಟುಕುವ ಈ ವಿಧಾನ ಒಳ್ಳೆಯ ಫಲಿತಾಂಶ ನೀಡುತ್ತದೆ.

3-4 ಸಲದ ಐಯುಐ ಪ್ರಕ್ರಿಯೆಯಲ್ಲೂ ಸಕಾರಾತ್ಮಕ ಫಲಿತಾಂಶ ಕಂಡುಬರದೇ ಇದ್ದರೆ ಐವಿಎಫ್ ಮೂಲಕ ಗರ್ಭದಲ್ಲಿ ಭ್ರೂಣವನ್ನು ಸೇರ್ಪಡೆ ಮಾಡಲಾಗುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಗರ್ಭಗುಡಿ
GarbhaGudi

**GARBHAGUDI IVF CENTRE**

MAIN & REG. OFFICE:
210/A, 14th Main, 50ft Road,
Hanumanthanagar, Bangalore-50.
**Mob: +91 988691556**

**Branches at:**
HRBR Layout- M:8861433339
Electronic City- M: 8861811116
South End Circle- M: 9972473555

**E-mail: info@garbhagudi.com**
**Web: www.garbhagudi.com**
**Tollfree: 1800-200-8288**